ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಗುರುವಾರ, ದಿನಾಂಕ : 10 ನೇ ಡಿಸೆಂಬರ್, 2020

ಕರ್ನಾಟಕ ಲೋಕಸೇವಾ ಆಯೋಗದವರು ನಡೆಸುವ ಪರೀಕ್ಷೆಗಳ ಕುರಿತು

ಶ್ರೀ ನಸೀರ್ ಅಹ್ಮದ್(ವಿಧಾನ ಸಭೆಯಿಂದ ಚುನಾಯಿತರಾದವರು) -

322 (232) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ಭಾರತ ಸರ್ಕಾರದ ಮಾಹಿತಿ ತಂತ್ರಜ್ಞಾನ ಇಲಾಖೆಯು ಇ-ಸಂಗ್ರಹಣಾ ವ್ಯವಸ್ಥೆಗಳ ಗುಣಮಟ್ಟ ಅವಶ್ಯಕತೆಗಳನ್ನು ಪಾಲಿಸಲು ಹೊರಡಿಸಿರುವ ಮಾರ್ಗಸೂಚಿಗಳಲ್ಲಿ, ಒಂದು ವೇಳೆ ಸಾರ್ವಜನಿಕ ಸಂಸ್ಥೆಯು ಇ-ಸಂಗ್ರಹಣೆ ಪ್ರಕ್ರಿಯೆಯಿಂದ ವಿನಾಯ್ತಿ ಪಡೆದರೆ, ಆಗ ಹೊರಗುತ್ತಿಗೆ ಏಜನ್ಸಿಯಿಂದ ಪರಿಶೀಲನೆ ಮತ್ತು ಲೆಕ್ಕಪರಿಶೋಧನೆ ಮಾಡಿಸಿ, ಪಾಲನೆ ದೃಢೀಕರಣ ಹೊಂದಲು ಬದ್ಧವಾಗಿರಬೇಕು ಎಂದು ಹೇಳಿರುವುದು ನಿಜವೇ;

(ಆ) ಕೆ. ಪಿ. ಎಸ್. ಸಿ. ಯು ಗೆಜೆಟೆಡ್ ಪ್ರೊಬೇಷನರ್‌ಗಳ ಮುಖ್ಯ ಪರೀಕ್ಷೆ-2015ರ ಡಿಜಿಟಲ್ ಮೌಲ್ಯಮಾಪನಕ್ಕೆ ಕೆ. ಟಿ. ಪಿ. ಪಿ. ಅಧಿನಿಯಮದ 4 (ಜಿ) ಪ್ರಕರಣದ ಅಡಿಯಲ್ಲಿ ವಿನಾಯ್ತಿ ಪಡೆದಿದೆಯೇ;

(ಇ) ಹಾಗಿದ್ದಲ್ಲಿ, ಕೆ. ಪಿ. ಎಸ್. ಸಿ. ಯು "ಗೆಜೆಟೆಡ್ ಪ್ರೊಬೇಷನರ್‌ಗಳ ಮುಖ್ಯ ಪರೀಕ್ಷೆ-2015ರ ಮುಖ್ಯ ಪರೀಕ್ಷೆಯ ಡಿಜಿಟಲ್ ಮೌಲ್ಯಮಾಪನದ ಸಂಪೂರ್ಣ ಪ್ರಕ್ರಿಯೆಯ ದತ್ತಾಂಶ ಏಕೀಕೃತ ಲೆಕ್ಕಪರಿಶೋಧನೆಯನ್ನು ಕೈಗೊಂಡಿದೆಯೇ?